ಪಠ್ಯಪುಸ್ತಕಗಳ ಮೂಲಕ ಪೌರತ್ವದ ನಿರ್ಮಾಣ

ರೂಪಮಂಜರಿ ಹೆಗ್ಡೆ

ಪೌರ ನೀತಿ, ಪೌರತ್ವ ಶಿಕ್ಷಣ ಅಥವಾ ಸಕ್ರಿಯ ನಾಗರಿಕತ್ವಕ್ಕಾಗಿ ಶಿಕ್ಷಣವೆಂದು ಜಗತ್ತಿನ ವಿವಿಧೆಡೆ ಕರೆಯಲ್ಪಡುವ ಪೌರತ್ವ ಶಿಕ್ಷಣವು, ಪ್ರಜಾಸತ್ತಾತ್ಮಕ ಸಮಾಜದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಕ್ಕಾಗಿ ಸಿದ್ಧಗೊಳಿಸಲು ಮುಖ್ಯವೆಂದು ಪರಿಗಣಿಸಲಾದ ನಿರ್ದಿಷ್ಟ ಜ್ಞಾನ, ಕೌಶಲಗಳು ಹಾಗು ಮನೋಧರ್ಮವನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸುವ ಗುರಿಯನ್ನು ಹೊಂದಿರುತ್ತದೆ. ಇದು ಕೆಲವೊಮ್ಮೆ ಎಳೆಯ ಮಕ್ಕಳಲ್ಲಿ ತಮ್ಮ ಕರ್ತವ್ಯ, ಜವಾಬ್ದಾರಿಗಳು ಮತ್ತು ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಮೂಲಕ ರಾಷ್ಟ್ರೀಯ ಅಭಿವೃದ್ಧಿ ಹಾಗು ರಾಷ್ಟ್ರ ನಿರ್ಮಾಣಕ್ಕೆ ನೆರವಾಗುವಂತೆ ಮಾಡುತ್ತದೆ. ಕೆಲವು ಎನ್‌ಸಿಇಆರ್‌ಟಿ ಪೌರನೀತಿಯ ಪಠ್ಯಪುಸ್ತಕಗಳು (1975–2000), ಉದಾಹರಣೆಗೆ, ವಿದ್ಯಾರ್ಥಿಯು ನಾಗರಿಕರಿಗೆ ಅಗತ್ಯವಾದ ಗುಣಗಳನ್ನು ಬೆಳೆಸಿಕೊಳ್ಳುವಂತೆ ನಿರಂತರವಾಗಿ ನೆನಪಿಸುತ್ತವೆ. ತಾರ್ಕಿಕ ವರ್ತನೆ, ಸಹಕಾರ ಮತ್ತು ಸಹ ಮಾನವರ ಬಗ್ಗೆ ಕಳಕಳ ವಹಿಸುವ ಮೂಲಕ ವಿಸ್ತೃತ ನೆಲೆಯಲ್ಲಿ ತನ್ನ ಕುಟುಂಬ, ಸಮುದಾಯ ಹಾಗು ಸಮಾಜಕ್ಕೆ ಆತನ/ಆಕೆಯ ಬಾಧ್ಯತೆಯನ್ನು ತೀರಿಸಬೇಕೆಂದು ಹೇಳಲಾಗುತ್ತದೆ.

ಆದರೆ, ವ್ಯಕ್ತಿಯೊಬ್ಬ ನಾಗರಿಕನಾದರೆ ಮಾತ್ರ ಸಾಲದು. ಬದಲಾಗಿ, ಆತ/ಆಕೆ ಉತ್ತಮ ನಾಗರಿಕನಾಗುವಂತೆ ಪ್ರೋತ್ಸಾಹಿಸಬೇಕು (ಎನ್‌ಸಿಇಆರ್‌ಟಿ 1988:49)– ಕೆಲವು ನಿರ್ದಿಷ್ಟ ಗುಣಗಳನ್ನು ಹೊಂದುವುದರ ಮೂಲಕ 'ನೆಲದ ಕಾನೂನನ್ನು ಗೌರವಿಸುವುದು': ದೇಶದ ಸಮಸ್ಯೆಗಳು ಮತ್ತು ಘಟನೆಗಳ ಬಗ್ಗೆ ಉತ್ತಮ ಮಾಹಿತಿ ಹೊಂದುವುದು (ಎನ್‌ಸಿಇಆರ್‌ಟಿ, 2003: 186) ಹಾಗು ದೇಶದ ಹಿತಕ್ಕೆ ಆದ್ಯತೆ ನೀಡುವ ಮೂಲಕ ದೇಶಕ್ಕೆ ಉಪಯುಕ್ತ ಆಗಬೇಕು. ವಿದ್ಯಾರ್ಥಿಗಳು 'ತಮ್ಮ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಅರಿವು ಹೊಂದಿರಬೇಕು' ಎಂದು ಹೇಳಿದರೂ, ವಿದ್ಯಾರ್ಥಿಗಳು ಬೆಳೆಸಿ-ಕೊಳ್ಳಬೇಕೆಂದು ನಿರೀಕ್ಷಿಸಲಾದ ಕರ್ತವ್ಯಗಳು ಹಾಗು ಜವಾಬ್ದಾರಿಗಳ ಬಗ್ಗೆ ಈ ಪಠ್ಯಪುಸ್ತಕಗಳು ಸ್ಪಷ್ಟವಾಗಿ ಪ್ರಾಧಾನ್ಯ ನೀಡುತ್ತವೆ.

ಆದರೆ, ಪ್ರಜಾಪ್ರಭುತ್ವದೊಳಗೆ ಪೌರತ್ವ ಎನ್ನುವುದು ಕರ್ತವ್ಯ ನಿರ್ವಹಣೆ ಮಾತ್ರವಲ್ಲ: ಸಂವಿಧಾನವು ಪ್ರತಿ ಪ್ರಜೆಗೂ ಖಾತ್ರಿಗೊಳಿಸಿದ, ಆತನ ವರ್ಗ, ಲಿಂಗ, ಧರ್ಮ, ಜಾತಿ ಹಾಗು ಜನಾಂಗೀಯತೆಯ ಹೊರತಾಗಿಯೂ, ನೀಡಲಾದ ಶಾಸನಾತ್ಮಕ ಮಾನ್ಯತೆಯ ಪ್ರಶ್ನೆಯಾಗಿದ್ದು, ಇದು ಇತರರೊಂದಿಗೆ ಗುರುತಿಸಿಕೊಂಡು ಒಳಗೊಳ್ಳುವ ಭಾವನೆಗಳನ್ನು ಅಭಿವೃದ್ಧಿ ಪಡಿಸಬೇಕು (ಜಯಲ್ 2013:2). ಭಿನ್ನ ರೀತಿಯಲ್ಲಿ ವಿನ್ಯಾಸಗೊಳಿಸಿದ ಪಠ್ಯಪುಸ್ತಕವೊಂದು ರಾಷ್ಟ್ರ, ನಾಗರಿಕತ್ವ ಮತ್ತು ಅಸ್ಮಿತೆ ಕುರಿತ ಕಲ್ಪನೆಗಳಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ತರಬಹುದೇ?

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 (ಎನ್‌ಸಿಎಫ್, 2005) ಕ್ರಾಂತಿಕಾರಕ ಸ್ಥಿತ್ಯಂತರಗಳನ್ನು ಪರಿಚಯಿಸಿದೆ ಎಂದು ತಜ್ಞರಿಂದ ಶ್ಲಾಘಿಸಲ್ಪಟ್ಟಿದೆ (ಬಾತ್ರ 2010–13). ಎನ್‌ಸಿಎಫ್‌ನಲ್ಲಿ ಪೌರತ್ವ ಶಿಕ್ಷಣವನ್ನು ಮಾನವಹಕ್ಕುಗಳು ಮತ್ತು ವಿಮರ್ಶಾತ್ಮಕ ಬೋಧನಾ ವಿಧಾನದ ದೃಷ್ಟಿಕೋನದಲ್ಲಿ ನೆಲೆಸಲಾಗಿದ್ದು, ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳ ದೃಷ್ಟಿಕೋನವನ್ನು ಒಳಗೊಳ್ಳಲು ಸಮಾನತೆ ಹಾಗು ಸಾಮಾಜಿಕ ನ್ಯಾಯದ ಸಂಗತಿಗಳನ್ನು ಸೇರ್ಪಡೆಗೊಳಿಸಲಾಗಿದೆ ಎಂದು ವಾದಿಸಲಾಗುತ್ತದೆ. 'ಭಾರತ ದೇಶವನ್ನು ಕಲ್ಪಿಸಿಕೊಳ್ಳುವ ವಿಭಿನ್ನ ಮಾರ್ಗಗಳು' (Multiple ways of imagining the Indian nation') ಮತ್ತು ಲಿಂಗ ಕಾಳಜಿಗಳಿಗೆ ಒತ್ತು ನೀಡುವ ಪ್ರಯತ್ನಗಳನ್ನು ಕೂಡ ನಡೆಸಲಾಗಿದೆ.

ಈ ಲೇಖನವು ಪರಿಸರ ಅಧ್ಯಯನ (Environmental Studies - EVS) ಮತ್ತು ಸಮಾಜವಿಜ್ಞಾನ ಪಠ್ಯಪುಸ್ತಕಗಳಾದ ಲುಕ್ಕಿಂಗ್ ಅರೌಂಡ್ (ತರಗತಿ 3–5) ಹಾಗು ಸೋಷಿಯಲ್ ಆಂಡ್ ಪೊಲಿಟಿಕಲ್ ಲೈಫ್ (ತರಗತಿ 6–8) ಸರಣಿಯನ್ನು ಸಂಕ್ಷಿಪ್ತವಾಗಿ ಪರಿಶೀಲಿಸಲಿದ್ದು, ಇಂಥ ಹೊಸ ದೃಷ್ಟಿಕೋನಗಳಿಗೆ ಯಾವ ಪ್ರಮಾಣದ ನಿರ್ದಿಷ್ಟ ರೂಪವನ್ನು ಕೊಡಲಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಿದೆ.

ಪಠ್ಯಪುಸ್ತಕಗಳಲ್ಲಿ ಪ್ರತಿಫಲಿಸುವ ಪಠ್ಯಕ್ರಮದ ಬದಲಾವಣೆಯು ಶಾಲಾ ಕೊಠಡಿಯ ಬೋಧನಾ ವಿಧಾನದ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ಬದಲಿಸಲು ಸಮರ್ಥವಾದಾಗ ಮಾತ್ರ ಅರ್ಥಪೂರ್ಣವೆನಿಸಲಿವೆ. ಇದು ಶಿಕ್ಷಕರ ಸಕ್ರಿಯ ಮಧ್ಯ-ಪ್ರವೇಶದಿಂದ ಮಾತ್ರ ಸಾಧ್ಯವಾಗಲಿದೆ. ಈ ಲೇಖನವು ಭವಿಷ್ಯದ ನಾಗರಿಕರನ್ನು ಪೋಷಿಸುವಲ್ಲಿ ಶಿಕ್ಷಕರು ಹೇಗೆ ಪ್ರಮುಖ ಪಾತ್ರ ವಹಿಸಬಲ್ಲರು ಎನ್ನುವುದನ್ನು ಪರಿಶೀಲಿಸಲಿದೆ.

ದೇಶವನ್ನು ಕಲ್ಪಿಸಿಕೊಳ್ಳುವುದು:

ಪಠ್ಯಪುಸ್ತಕಗಳಲ್ಲಿ ಪೌರತ್ವದ ನಿರ್ಮಿತಿಯು ಸಾಮಾನ್ಯವಾಗಿ ದೇಶವನ್ನು ಹೇಗೆ ಕಲ್ಪಿಸಿಕೊಳ್ಳಲಾಗುತ್ತದೆ ಎಂಬುದನ್ನು ಪ್ರತಿಫಲಿಸುತ್ತದೆ. ಈ ಕಲ್ಪನೆಯಲ್ಲಿ ಯಾರನ್ನು ಮತ್ತು ಹೇಗೆ ಕಾನೂನುಬದ್ಧ ಪೌರರು ಎಂದು ಸೇರ್ಪಡೆಗೊಳಿಸಿ-ಕೊಳ್ಳಲಾಗುತ್ತದೆ? ಯಾರನ್ನು ಹೊರಗಿಡಲಾಗುತ್ತದೆ? ಈ ಪ್ರಶ್ನೆಗಳು ವಿಮರ್ಶಾತ್ಮಕ ವಿಶ್ಲೇಷಣೆಯನ್ನು ಬೇಡುತ್ತವೆ. ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್ಎಸ್‌ಸಿ)– 2000 ಮತ್ತು ಅದನ್ನು ಅನುಸರಿಸಿದ ಇಂಗ್ಲಿಷ್ ಹಾಗು ಸಮಾಜವಿಜ್ಞಾನದ ಪಠ್ಯಪುಸ್ತಕಗಳು ಬಹುಸಂಖ್ಯಾತರ ಪರವಾದ ಮತ್ತು ಪಿತೃಪ್ರಧಾನ ರಾಷ್ಟ್ರೀಯ ಅಸ್ಮಿತೆಯನ್ನು ಪ್ರಚುರಗೊಳಿಸಿದ್ದರಿಂದ, ಅವು ಭಾರತೀಯ ಸಮಾಜದ ಬಹುತ್ವದ ಗುಣವೈಶಿಷ್ಟ್ಯವನ್ನು ಶಿಥಿಲಗೊಳಿಸಿವೆ ಎಂಬ ತೀವ್ರ ಟೀಕೆಗೆ ಗುರಿಯಾದವು. ಅದಕ್ಕೆ ವ್ಯತಿರಿಕ್ತವಾಗಿ ಎನ್‌ಸಿಎಫ್–2005 "ನಮ್ಮ ಸಮಾಜದಲ್ಲಿ ಅಂತರ್ಗತವಾಗಿರುವ ಸಾಂಸ್ಕೃತಿಕ ಬಹುತ್ವಕ್ಕೆ ಪೂರಕವಾಗಿ ಪ್ರತಿಕ್ರಿಯಿಸುವ, ಆ ಮೂಲಕ 'ಸದೃಢ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಸುಸ್ಥಿರಗೊಳಿಸುವ' ಶಿಕ್ಷಣ ವ್ಯವಸ್ಥೆಯನ್ನು ಪ್ರಸ್ತಾಪಿಸುತ್ತದೆ. ಅದು ಜಾತ್ಯತೀತತೆ, ಸರ್ವಸಮಾನತೆ ಬಹುತ್ವ, ಹಾಗು ಸಾಮಾಜಿಕ ನ್ಯಾಯವನ್ನು ಆಧರಿಸಿದ ರಾಷ್ಟ್ರೀಯ ಅಸ್ಮಿತೆಯನ್ನು ಪುನರುಚ್ಚರಿಸುತ್ತದೆ.

ಲುಕಿಂಗ್ ಅರೌಂಡ್ (ಎಲ್‌ಎ)(ii) ಹಾಗು ಸೋಷಿಯಲ್ ಆಂಡ್ ಪೊಲಿಟಿಕಲ್ ಲೈಫ್ (ಎಸ್‌ಪಿಎಲ್)(ii), ಈ ಸರಣಿಯ ಸೂಕ್ಷ್ಮವಾದ ಪರಿಶೀಲನೆಯಿಂದ ವಿವಿಧ ಪ್ರಾಂತ್ಯ, ಸಮಾಜೋ ಆರ್ಥಿಕ ಹಾಗು ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ವಾಸಿಸುವ ಜನರನ್ನುಳ್ಳ ಸಮಾಜವು ಕಾಣಿಸುವಂತೆ ಮಾಡುತ್ತದೆ. ಇಲ್ಲಿರುವ ಜನರು ಮುಂಬೈಯಂಥ ಮೆಟ್ರೋ (ಶಾಂತಿಯ ಕಥೆ, ಎಸ್‌ಪಿಎಲ್ iii:67), ಆಂಧ್ರಪ್ರದೇಶದ ಕರ್ನೂಲ್‌ನಂಥ ಅರೆ ನಗರ ಪ್ರದೇಶ (ಸ್ವಪ್ನಾಳ ಕತೆ, ಎಸ್‌ಪಿಎಲ್ 11:105)ದಿಂದ ಹಿಡಿದು ಮಧ್ಯಪ್ರದೇಶದ ಗ್ರಾಮೀಣ ಒಳನಾಡು (ತವಾ ಮತ್ಸ್ಯ ಸಂಘದ ಕಥೆ, ಎಸ್‌ಪಿಎಲ್ II:118) ಹಾಗು ಒಡಿಶಾದ ಆದಿವಾಸಿ ಪ್ರದೇಶದ (ದಾದೂರ ಕತೆ, ಎಸ್‌ಪಿಎಲ್ III:81–82)ದಂಥ ದೇಶದ ವಿವಿಧ ಭಾಗಗಳಿಗೆ ಸೇರಿರುತ್ತಾರೆ. ಪ್ರಾದೇಶಿಕ ಗುಣವೈಶಿಷ್ಟ್ಯಗಳಾದ ಆಹಾರಾ–ಭ್ಯಾಸ, ಉಡುಗೆತೊಡುಗೆ ಹಾಗು ಮನೆ ನಿರ್ಮಾಣದಲ್ಲಿ ಬಳಕೆಯಾದ ವಾಸ್ತುಶಿಲ್ಪ ಪದ್ಧತಿಗಳು ಕೂಡ ಚಿತ್ರಣಗೊಂಡಿತ್ತು. ಉದಾಹರಣೆಗೆ, ಫುಡ್ ವಿ ಈಟ್ (ಎಲ್‌ಎ I)ನಲ್ಲಿ ಕಾಶ್ಮೀರದಿಂದ ಕೇರಳದವರೆಗೆ ಭಾರತದ ನಾನಾ ಭಾಗಗಳ ಜನರು ಸೇವಿಸುವ ವೈವಿಧ್ಯಮಯ ಆಹಾರದ ಕುರಿತ ಪಠ್ಯ ಇದ್ದರೆ, ಅದೇ ಪುಸ್ತಕದ ಇನ್ನೊಂದು ಪಾಠ 'ಎ ಹೌಸ್ ಲೈಕ್ ದಿಸ್'ನಲ್ಲಿ ಭೂಪೇನ್ (ಅಸ್ಸಾಂ), ನಸೀಂ (ಶ್ರೀನಗರ), ಚಮೇಲಿ (ಮನಾಲಿ), ಕಾನ್ಶಿರಾಂ (ರಾಜಸ್ಥಾನ) ಮತ್ತು ಮಿಥಾಲಿ (ದೆಹಲಿ) ತಮ್ಮ ಸುತ್ತಲಿನ ಪರಿಸರಕ್ಕೆ ಅನುಗುಣವಾಗಿ ತಮ್ಮ ಮನೆಗಳ ವಿನ್ಯಾಸ ಹೇಗೆ ಬದಲಾಗಿದೆ ಎನ್ನುವ ಅಂಶಗಳನ್ನು ಹಂಚಿಕೊಳ್ಳುವುದನ್ನು ಕೊಡಲಾಗಿದೆ ಬಹುತೇಕ ಪ್ರಕರಣಗಳಲ್ಲಿ ಮುದ್ರಿತ ಕಥನವು ಸೂಕ್ತ ವರ್ಣಮಯ ಚಿತ್ರಕೆಗಳನ್ನು ಒಳಗೊಂಡಿದ್ದು, ಮಕ್ಕಳು ಪಠ್ಯದ ಮಾಹಿತಿಯನ್ನು ದೃಶ್ಯೀಕರಿಸಿಕೊಳ್ಳಲು ನೆರವಾಗಿವೆ..

ಈ ಪಠ್ಯಪುಸ್ತಕಗಳ ಸಮಾಜೋ ಸಾಂಸ್ಕೃತಿಕ ಹರಹು ಕೂಡ ಬಹುಧಾರ್ಮಿಕವಾಗಿದ್ದುದು.. ಮುಸ್ಲಿಂ ಮಹಿಳಾ ಧೋಬಿ ಅನ್ವಾರಿ, (ಎಲ್‌ಎ III:26), ಮನೆ ಕೆಲಸದ ಕ್ರೈಸ್ತ ಮಹಿಳೆ ಮೆಲನಿ (ಎಸ್‌ಪಿಎಲ್ II:49) ಮತ್ತು ಸಿಖ್ ಮಧ್ಯಮ ಮೇಲ್ವರ್ಗದ ಗೃಹಿಣಿ ಜಸ್‌ಪ್ರೀತ್ (ಎಸ್‌ಎಎಲ್ II:47) ಹೀಗೆ ವಿವಿಧ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಸದಸ್ಯರ ಉಪಸ್ಥಿತಿಯಲ್ಲಿ ಇದನ್ನು ಕಾಣಬಹುದು. ಆ ಮೂಲಕ ಭಾರತದ ಸಮಾಜೋ ಸಾಂಸ್ಕೃತಿಕ ಹರಹು ಮುಖ್ಯವಾದ ಹಾಗು ಏಕರೂಪವಾದದ್ದು ಎನ್ನುವ ಸಂಕುಚಿತತೆಗೆ ಈ ಪಠ್ಯಪುಸ್ತಕಗಳು ಸವಾಲು ಎಸೆಯುತ್ತವೆ. ಬದಲಾಗಿ, ಅದು ಭಾರತದ ಬಹುತ್ವ, ವೈವಿಧ್ಯಮಯವಲ್ಲದ ಹಾಗು ಬಹುಸಾಂಸ್ಕೃತಿಕ ಗುಣವೈಶಿಷ್ಟ್ಯವನ್ನು ಎತ್ತಿಹಿಡಿಯುತ್ತವೆ.

ಸಾಂಸ್ಕೃತಿಕ ವೈವಿಧ್ಯತೆ ಮತ್ತು ಆರ್ಥಿಕ ಅಸಮಾನತೆ:

ಹಿಂದಿನ ಕೆಲವು ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳು (1975–2004) ಸಾಂಸ್ಕೃತಿಕ ವೈವಿಧ್ಯತೆಯನ್ನು ಸಾಮರ್ಥ್ಯದ ಮೂಲ ಎಂದಷ್ಟೇ ಚಿತ್ರಿಸುವ ಮೂಲಕ ಆರ್ಥಿಕ ಅಸಮಾನತೆಗಳು ಮತ್ತು ಸಮಾಜೋಸಾಂಸ್ಕೃತಿಕ ಅಸಂಗತತೆಯನ್ನು ಪರಿಗಣಿಸುತ್ತಿರಲಿಲ್ಲ. ಆದರೆ, ಎಲ್‌ಎ ಮತ್ತು ಎಸ್‌ಪಿಎಲ್ ಸರಣಿಗಳು ವೈವಿಧ್ಯತೆಯ ಸಮಸ್ಯಾತ್ಮಕ ಸ್ವರೂಪವನ್ನು ಬಿಂಬಿಸಿದವು. ಅದರ ಪ್ರಯೋಜನಗಳನ್ನು ಗುರುತಿಸುತ್ತಲೇ, ಸಮಾಜೋ ಆರ್ಥಿಕ ವ್ಯತ್ಯಾಸಗಳಿಂದ ಮೂಡುವ ವೈವಿಧ್ಯತೆಯು ಹೇಗೆ ಅಸಮಾನತೆ ಹಾಗು ತಾರತಮ್ಯಕ್ಕೆ ದಾರಿ ಮಾಡಿಕೊಡುತ್ತದೆ ಎನ್ನುವುದನ್ನು ಗುರುತಿಸಿತು. ಉದಾಹರಣೆಗೆ, ಫುಡ್ ವಿ ಈಟ್ (ಎಲ್‌ಎ I:36–42)ನ ಪಾಠವೊಂದು ವೈವಿಧ್ಯಮಯ ಹಿನ್ನೆಲೆಯ ಮಕ್ಕಳು ತಾವು ರಾತ್ರಿ ಏನು ತಿಂದೆವು ಎಂದು ಚರ್ಚೆ ಮಾಡುತ್ತಿರುವ ಚಿಂತನೆಗೆ ಹಚ್ಚುವಂಥ ದೃಶ್ಯಾವಳಿಯಿಂದ ಆರಂಭವಾಗುತ್ತದೆ. ಬೇರೆಬೇರೆ ಮಕ್ಕಳು 'ಪೂರಿ, ಪಾಯಸ, ಆಮ್ಲೆಟ್' ಅಥವಾ 'ಮೀನು' ಅಥವಾ 'ಬೇಳೆಸಾರು ಮತ್ತು ಅನ್ನ' ಎಂದು ಹೇಳುತ್ತಿರುವಾಗ, ಮಗುವೊಂದು ತನ್ನ ತಾಯಿ ಕೆಲಸ ಮಾಡುವ ಮನೆಯಿಂದ ತಂದ ಇತರರು ತಿನ್ನದೆ ಉಳಿಸಿದ ಶಾವಿಗೆಯನ್ನು ಇಷ್ಟಪಟ್ಟು ತಿಂದೆ ಎಂದು ಹೇಳಿಕೊಂಡಿತು. ಇನ್ನೊಂದು ಮಗು ನಮ್ಮ ಮನೆಯಲ್ಲಿ 'ಅಡುಗೆ ಮಾಡುವುದಿಲ್ಲ' ಎಂದಿತು. ಚರ್ಚೆಯು ಸಾಂಸ್ಕೃತಿಕ ವೈವಿಧ್ಯತೆ ಮಾತ್ರವಲ್ಲದೆ, ಸಮಾಜದಲ್ಲಿ ಚಾಲ್ತಿಯಲ್ಲಿರುವ ತೀವ್ರ ಆರ್ಥಿಕ ಅಸಮಾನತೆಯ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಚಿತ್ರಗಳ ಬಳಿಕ ಆಲೋಚನೆಯನ್ನು ಕೆದಕುವ ಪ್ರಶ್ನೆಗಳು ಸರಣಿಯೋಪಾದಿಯಲ್ಲಿ ಕೇಳಲ್ಪಟ್ಟು, ಆ ಮೂಲಕ ವಿಷಯದೊಂದಿಗೆ ಗಾಢವಾಗಿ ತೊಡಗಿಕೊಳ್ಳುವ ಅವಕಾಶವು ಸೃಷ್ಟಿಯಾಗುತ್ತದೆ.


- ಚಿತ್ರದಲ್ಲಿ ಒಂದು ಮಗು ತನ್ನ ಮನೆಯಲ್ಲಿ ಅಡುಗೆ ಮಾಡಿರಲಿಲ್ಲ ಎಂದಿರುವುದನ್ನು ನೀವು ಗಮನಿಸಿರಬಹುದು. ಇದಕ್ಕೆ ಕಾರಣ ಏನಿರಬಹುದು?
- ಒಂದು ದಿನ ನೀವು ಹಸಿದಿರುವಾಗ, ತಿನ್ನಲು ಏನೂ ಸಿಗದ ಪರಿಸ್ಥಿತಿ ಎದುರಿಸಿದ್ದೀರಾ? ಹೌದು ಎಂದಾದರೆ, ಏಕೆ?

ಗ್ರಾಮ ಮತ್ತು ನಗರದ ಸ್ಥಿತಿಗತಿಗಳನ್ನು ಸರಳ, ಸುಂದರ ಪ್ರದೇಶ ಎಂದಾಗಲೀ ಇಲ್ಲವೇ ಹಲವು ಸಮಸ್ಯೆಗಳಿಂದ ಪೀಡಿತವಾದವು ಎನ್ನುವ ಇಬ್ಬಗೆಯ ಮಾದರಿಯಾಗಿ ನೋಡುವ ಬದಲು, ಈ ಪಠ್ಯಪುಸ್ತಕಗಳು ಅವುಗಳನ್ನು ವರ್ಗ ಮತ್ತು ಜಾತಿಯ ಶ್ರೇಣೀಕರಣವಿರುವ, ನಾನಾ ಹಿತಾಸಕ್ತಿಗಳುಳ್ಳವರು ತಮ್ಮ ಪಾಲನ್ನು ಪಡೆದುಕೊಳ್ಳಲು ಸಂಧಾನ ಹಾಗು ಸಂಘರ್ಷ ನಡೆಸುವ ಸ್ಪರ್ಧಾತ್ಮಕ ಪ್ರದೇಶ ಪರಿಗಣಿಸುತ್ತವೆ. ಎಲ್‌ಎ ಮತ್ತು ಎಸ್‌ಪಿಎಲ್ ಸರಣಿಯಲ್ಲಿರುವ ಜನರು ನಗರ ಇಲ್ಲವೇ ಗ್ರಾಮೀಣ ಪ್ರದೇಶದವರಾಗಿರಲೀ, ನಾನಾ ಸಾಮಾಜಿಕ ಅಂತಸ್ತಿಗೆ ಸೇರಿದವರಾಗಿದ್ದು, ಬೇರೆಬೇರೆ ಜೀವನಾಧಾರ ಮೂಲ ಹಾಗು ಜೀವನಮಟ್ಟಗಳನ್ನು ಹೊಂದಿರುತ್ತಾರೆ ಎಂದು ತೋರಿಸಲಾಗಿದೆ. ಎರಡೂ ಕಡೆ ಸಾಮಾನ್ಯ ಜನರು ತಮ್ಮ ಘನತೆಯ ಬದುಕಿಗಾಗಿ ಮೂಲಭೂತ ಹಕ್ಕನ್ನು ಪಡೆದುಕೊಳ್ಳಲು ಹೇಗೆ ಕಷ್ಟಪಡುತ್ತಾರೆ ಎನ್ನುವುದನ್ನು ಕೂಡ ಈ ಪಠ್ಯಪುಸ್ತಕಗಳಲ್ಲಿ ಎತ್ತಿ ತೋರಿಸಲಾಗಿದೆ.

ಉದಾಹರಣೆಗೆ: ಎಲ್‌ಎ ಮತ್ತು ಎಸ್‌ಪಿಎಲ್ ಸರಣಿಯಲ್ಲಿ ಬರುವ ಕೃಷಿಕ ಸಮುದಾಯಗಳು, ಉದಾಹರಣೆಗೆ, ಶ್ರೀಮಂತ ಜಮೀನುದಾರ (ರಾಮಲಿಂಗಂ, ಎಸ್‌ಪಿಎಲ್ I:71), ಸಣ್ಣ ಹಿಡುವಳಿದಾರರು (ಶೇಖರ್, ಎಸ್‌ಪಿಎಲ್ I:70) ಮತ್ತು ಜೀವನಕ್ಕೆ ಅಗತ್ಯವಿರುವಷ್ಟನ್ನು ದುಡಿಯಲು ಹೆಣಗಾಡುತ್ತಿರುವ ಭೂರಹಿತ ಕಾರ್ಮಿಕರ ಬದುಕು (ಧನು, ಎಲ್‌ಎ II:200: ತುಳಸಿ, ಎಸ್‌ಪಿಎಲ್ I:68), ತೀವ್ರವಾಗಿ ವಿಭಜಿತಗೊಂಡಿವೆ. ಗ್ರಾಮೀಣ ಆರ್ಥಿಕತೆಯು ನಾನಾ ಕೃಷಿಯೇತರ ಚಟುವಟಿಕೆಗಳಾದ ಮೀನುಗಾರಿಕೆ, ನೇಕಾರಿಕೆ, ಪಶುಸಾಕಣೆ ಹಾಗು ಲೇವಾದೇವಿ ವ್ಯವಹಾರ (ಅಧ್ಯಾಯ 22, ಎಲ್‌ಎ II: ಅಧ್ಯಾಯ 8, ಎಸ್‌ಪಿಎಲ್ 1)ವನ್ನು ಆಧರಿಸಿದೆ ಎಂದು ತೋರಿಸಲಾಗಿದೆ. ರೈತರಂಥ ಗ್ರಾಮೀಣರು ಎದುರಿಸುವ ಸಂಕಷ್ಟಗಳನ್ನು ಎತ್ತಿಹಿಡಿಯಲಾಗಿದೆ (ಶೇಖರ್ ಎಸ್‌ಪಿಎಲ್ I:70 ಬೆಳೆ ವೈಫಲ್ಯ, ಸಾಲ ಮತ್ತು ಆತ್ಮಹತ್ಯೆ).

ಎಲ್‌ಎ ಮತ್ತು ಎಸ್‌ಪಿಎಲ್ ಸರಣಿಯಲ್ಲಿನ ನಗರ ಪ್ರದೇಶಗಳು ಗಗನಚುಂಬಿ ಕಟ್ಟಡಗಳು, ವೇಗದ ವಾಹನ ಸಂಚಾರ, ಐಷಾರಾಮಿ ಆಸ್ಪತ್ರೆಗಳು ಹಾಗು ಸುವ್ಯವಸ್ಥಿತ ಮಾಲ್‌ಗಳು ಮಾತ್ರವನ್ನಲ್ಲದೆ, ಕೂಲಿ, ಕೆಲಸಗಾರರ ನೈರ್ಮಲ್ಯರಹಿತ ವಸತಿ ಸಮುದಾಯಗಳು,

ತುಂಬಿತುಳುಕುವ ಸರ್ಕಾರಿ ಆಸ್ಪತ್ರೆಗಳು ಮತ್ತು ರಸ್ತೆ ಬದಿಯ ತೆರೆದ ಮಾರುಕಟ್ಟೆಗಳನ್ನು ಸಹ ಒಳಗೊಂಡಿರುತ್ತವೆ. ನಗರ ಪ್ರದೇಶದಲ್ಲಿ ನಾನಾ ಸಮಾಜೋಆರ್ಥಿಕ ಸ್ತರಗಳಿಗೆ ಸೇರಿದವರು ಇರುತ್ತಾರೆ. ಇಲ್ಲಿ ಅತ್ಯಂತ ಶ್ರೀಮಂತ ಉದ್ಯಮಿಗಳು, ಮೇಲ್-ಮಧ್ಯಮ ಹಾಗು ಮಧ್ಯಮ ವರ್ಗದ ಸಲಹೆಗಾರರು ಮತ್ತು ಸರ್ಕಾರಿ ನೌಕರರು ಕೆಳ ಮಧ್ಯಮ ವರ್ಗದ ಮತ್ತು ಶ್ರಮಿಕ ವರ್ಗಗಳಾದ ಕಾರ್ಖಾನೆ ಕಾರ್ಮಿಕರು, ರಸ್ತೆ ಬದಿ ವ್ಯಾಪಾರಿಗಳು, ಮನೆ ಕೆಲಸದವರು, ಕುಶಲಕರ್ಮಿಗಳು, ರಿಕ್ಷಾ ಚಾಲಕರು, ದಿನಗೂಲಿಗಳು, ವಸತಿರಹಿತ ಹಾಗು ಬೀದಿಯಲ್ಲಿ ವಾಸಿಸುವ ಮಕ್ಕಳೊಟ್ಟಿಗೆ ಸಹಜೀವನ ನಡೆಸುತ್ತಾರೆ ಎಂದು ತೋರಿಸಲಾಗಿದೆ. ನಗರ ಪ್ರದೇಶದಲ್ಲಿರುವವರು -ನೈರ್ಮಲ್ಯರಹಿತ ಜೀವನ ಸ್ಥಿತಿ (ಕಾಂತ, ಎಸ್‌ಪಿಎಲ್ II:4-5), ನೀರು ಮತ್ತಿತರ ಮೂಲಸೌಲಭ್ಯಗಳ ಕೊರತೆ (ನಂದಿಯಾ ಕಮ್ಸ್ ಟು ಮುಂಬೈ, ಎಲ್‌ಎ, ತರಗತಿ 4: ಚೆನ್ನೈ ನಗರವಾಸಿಗಳ ಪ್ರಕರಣ ಅಧ್ಯಯನ, ಎಸ್‌ಪಿಎಲ್ III:106-107) ಹಾಗು ನಿರ್ವಸತಿ (ಚೋಟೂಸ್ ಹೌಸ್, ಎಲ್‌ಎ, 3ನೇ ತರಗತಿ) – ಮೊದಲಾದ ತಮ್ಮದೇ ಆದ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸುತ್ತಿರುತ್ತಾರೆ ಎಂದು ತೋರಿಸಲಾಗಿದೆ.



ಚೋಟೂಸ್ ಹೌಸ್, ಲುಕಿಂಗ್ ಅರೌಂಡ್, 3ನೇ ತರಗತಿ ಎನ್‌ಸಿಇಆರ್‌ಟಿ ಪಠ್ಯಪುಸ್ತಕ 2006

ಲಿಂಗ ಕಾಳಜಿಗಳ ಬಗ್ಗೆ ಗಮನ ಹರಿಸುವುದು

ಈ ಮೊದಲಿನ ಎನ್‌ಸಿಇಆರ್‌ಟಿ ಪೌರನೀತಿಯ ಪಠ್ಯಪುಸ್ತಕಗಳಲ್ಲಿ (2002-04) ಎರಡೂ ಲಿಂಗಗಳಿಗೆ ಉತ್ತಮ ಪ್ರಾತಿನಿಧ್ಯ ನೀಡಿದ್ದರೂ, ಕೆಲಸದ ವಿಂಗಡಣೆಗೆ ಸಂಬಂಧಿಸಿದ ದೃಶ್ಯಾವಳಿಗಳು ಕೆಲವು ರೂಢಿಗತ ಸಾಮಾಜಿಕ ಪಡಿಯಚ್ಚುಗಳನ್ನು ಬಲಪಡಿಸುವಂತೆ ಇದ್ದವು. ಸರೋಜಿನಿ ನಾಯ್ಡು ಮತ್ತು ವಿಜಯಲಕ್ಷ್ಮೀ ಪಂಡಿತ್ ಅವರಂಥ ಸುಪ್ರಸಿದ್ಧ ವ್ಯಕ್ತಿಗಳನ್ನು ಹೊರತುಪಡಿಸಿ (ಎನ್‌ಸಿಇಆರ್‌ಟಿ 2003: 176), (ಎನ್‌ಸಿಇಆರ್‌ಟಿ 1987: ಎನ್‌ಸಿಇಆರ್‌ಟಿ 2002) ಈ ಪಠ್ಯಪುಸ್ತಕಗಳಲ್ಲಿ ಬರುವ ಮಹಿಳೆಯರ ಚಿತ್ರಣಗಳು ಪೋಷಿಸುವವರು ಹಾಗು ಸಂರಕ್ಷಿಸುವವರು (ಗೃಹಿಣಿಯರು, ದಾದಿಯರು) ಎಂಬುದಾಗಿ ಬಿಂಬಿಸಲ್ಪಟ್ಟಿದೆ.

ನಾಗರಿಕರ ಎಲ್‌ಎ ಮತ್ತು ಎಸ್‌ಪಿಎಲ್ ಸರಣಿಗಳಲ್ಲಿ ಮಹಿಳೆಯರು ಪುರುಷರ ಜೊತೆಗೆ ಸಮಾನ ವೇದಿಕೆಯನ್ನು ಹಂಚಿಕೊಳ್ಳುತ್ತಾರೆ. ಪ್ರಖ್ಯಾತರಾದ ಪಂಡಿತಾ ರಮಾಬಾಯಿ, ರೊಕೆಯ ಶೆಖಾವತ್ ಹುಸೇನ್‌ರಂಥವರ ಕೊಡುಗೆಗಳ ಕುರಿತು ಚರ್ಚೆ ನಡೆದಿದ್ದರೂ, ಕೆಲವರ ಸಾಧನೆಗೆ ಸೀಮಿತವಾಗದೆ, ಅದನ್ನು ಮೀರುವ ನಿರ್ದಿಷ್ಟ ಪ್ರಯತ್ನ ನಡೆಸಲಾಗಿದೆ. ಪಠ್ಯಪುಸ್ತಕಗಳಲ್ಲಿ ನಾನಾ ಸಾಮಾಜಿಕ ಗುಂಪಿಗೆ ಸೇರಿದ ಸಾಮಾನ್ಯ ಮಹಿಳೆಯರು ಕುಟುಂಬದ ಆದಾಯಕ್ಕೆ ಪಾಲು ನೀಡುತ್ತಿರುವುದರ ಜೊತೆಗೆ ಸಮುದಾಯ ಹಾಗು ದೇಶದ ಸಮಾಜೋ-ಆರ್ಥಿಕ ಅಭಿವೃದ್ಧಿಗೆ ಕಾಣಿಕೆ ಸಲ್ಲಿಸುತ್ತಿರುವ ಹಲವು ಉದಾಹರಣೆಗಳಿವೆ. ಮಹಿಳೆಯರನ್ನು ಅವರ ಸಾಂಪ್ರದಾಯಿಕ ಪೋಷಣೆಗೆ ಸಂಬಂಧಿಸಿದ ಪಾತ್ರಗಳಲ್ಲಿ (ಶಬ್ನಂಬಾನು, ಎಸ್‌ಪಿಎಲ್ II:5) ಮಾತ್ರವಲ್ಲದೆ, ಕುಟುಂಬದ ದುಡಿಯುವ ಸದಸ್ಯರಾಗಿ, ಉದಾಹರಣೆಗೆ, ಕಸ ಸಂಗ್ರಹಿಸುವವರು (ಎಲ್‌ಎ III :147; ಎಸ್‌ಪಿಎಲ್ 3:101), ಮೀನುಗಾರರು (ಅರುಣಾ, ಎಸ್‌ಪಿಎಲ್ I:73), ಮನೆ ಕೆಲಸದವರು (ಎಲ್‌ಎ I:83: ಮೆಲನಿ, ಎಸ್‌ಪಿಎಲ್ II: 49), ಧೋಬಿಗಳು (ಅನ್ವರಿ, ಎಲ್‌ಎ I:27), ಜೇನುಸಾಕಣೆ (ಅನಿತಾ, ಎಲ್‌ಎ 3:38) ಮತ್ತು ಕಾರ್ಖಾನೆ ಕಾರ್ಮಿಕರು (ಎಸ್‌ಪಿಎಲ್ II:109) ಇರುತ್ತಾರೆ. ಅವರು ಶಿಕ್ಷಕಿಯರು (ಮಂಜಿತ್ ಕೌರ್, ಎಸ್‌ಪಿಎಲ್ II:4), ಸರ್ಕಾರಿ ಉದ್ಯೋಗಿಗಳು (ಯಾಸ್ಮಿನ್ ಎಸ್‌ಪಿಎಲ್ I:57), ಉದ್ಯಮಿಗಳು (ವಂದನಾ ಎಸ್‌ಪಿಎಲ್ I:80-81) ಹಾಗು ವಕೀಲರು (ಕಮಲಾ ರಾಯ್ ಎಸ್‌ಪಿಎಲ್ III:69-70) ಸೇರಿದಂತೆ ಹಲವು ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುತ್ತಾರೆ.

ಉದ್ಯೋಗಸ್ಥ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಹಲವು ಕತೆಗಳಲ್ಲಿ ಪ್ರಸ್ತಾಪಗೊಂಡಿವೆ. ಅನಿಯಮಿತ ಆದಾಯ ಮೂಲ ಮತ್ತು ಕಡಿಮೆ ವೇತನದಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ತುಳಸಿಯಂಥ ಭೂರಹಿತ ಕೃಷಿ ಕಾರ್ಮಿಕರು ಹಾಗು ತಾತ್ಕಾಲಿಕ ಆಧಾರದಲ್ಲಿ ಕೆಲಸ ಮಾಡುವ ನಿರ್ಮಲಾರಂಥ ಕಾರ್ಖಾನೆಗಳಲ್ಲಿ ದುಡಿಯುವ ಮಹಿಳಾ ಕಾರ್ಮಿಕರನ್ನು ಇಲ್ಲಿ ಉಲ್ಲೇಖಿಸಬಹುದು.

ಎಸ್‌ಪಿಎಲ್ ಸರಣಿಯಲ್ಲಿ ಲಿಂಗ ಸಂಬಂಧಿ ರೂಢಿಗತ ಎನ್ನುವುದು ಹೇಗೆ ಸಾಮಾಜಿಕ ನಿರ್ಮಿತಿ ಎನ್ನುವುದನ್ನು ಓದುಗರಿಗೆ ಅರ್ಥ ಮಾಡಿಸಲು ಅವಕಾಶಗಳಿವೆ. ಲಿಂಗ ಪಡಿಯಚ್ಚುಗಳು ಹಾಗು ಮಹಿಳೆಯರನ್ನು ಪಾಲಕ–ಪೋಷಕರು ಮತ್ತು ಗೃಹಿಣಿಯರೆಂಬ ಅಪಮೌಲ್ಯೀಕರಣವು ಸಮಾಜದ ನಾನಾ ಸ್ತರಗಳು ಮತ್ತು ಸಮುದಾಯದಲ್ಲಿ ಅಸ್ತಿತ್ವದಲ್ಲಿದೆ ಎನ್ನುವುದನ್ನು ಮೇಲ್ವರ್ಗಕ್ಕೆ ಸೇರಿದ ಗೃಹಿಣಿ (ಜಸ್‌ಪ್ರೀತ್ ಎಸ್‌ಪಿಎಲ್ II:47–48) ಮತ್ತು ಮನೆಕೆಲಸ ಮಾಡುವ ಮೆಲನಿಯ ಪ್ರಕರಣ ಅಧ್ಯಯನ (ಎಸ್‌ಪಿಎಲ್ II:49)ದಲ್ಲಿ ಎತ್ತಿ ತೋರಿಸಲಾಗಿದೆ. ಮನೆಗೆಲಸದ ಬಗ್ಗೆ ಘನತೆ ಮತ್ತು ಮೌಲ್ಯಕ್ಕೆ ಒತ್ತು ನೀಡುವ ಪ್ರಯತ್ನಗಳೂ ಪಠ್ಯಪುಸ್ತಕದಲ್ಲಿದೆ. ಉದಾಹರಣೆಗೆ, ಪರಿಸರ ಅಧ್ಯಯನ ಪಠ್ಯಪುಸ್ತಕದಲ್ಲಿ ದೀಪಾಲಿ ಎಂಬ ಹುಡುಗಿಯ ಒಂದು ಕಥೆಯಿದೆ. (ವರ್ಕ್ ವೀ ಡು ಎಲ್‌ಪಿ I:83). ಮನೆಗೆಲಸ ಮಾಡುವ ತಾಯಿ ಹಾಗು ತರಕಾರಿ ಮಾರಾಟಗಾರರಾದ ತಂದೆಯ ಹಿರಿಯ ಮಗಳಾದ ದೀಪಾಲಿಯ ಮೇಲೆ ಕಿರಿಯ ಸೋದರ ಸೋದರಿಯರ ಜವಾಬ್ದಾರಿಯಲ್ಲದೆ, ಅಡುಗೆ, ಶುಚೀಕರಣ ಮತ್ತಿತರ ಕೆಲಸಗಳನ್ನು ಹೇರಲಾಗಿತ್ತು. ಸಂಸಾರ ಸಾಗಿಸಲು ಆಕೆಯ ಪೋಷಕರು ಪರದಾಡುತ್ತಿದ್ದರು. ಈ ಕತೆಯು ಸೂಕ್ಷ್ಮವಾಗಿ ಆದರೂ, ದೃಢವಾಗಿ ಬಡತನದಿಂದಾಗಿ ಹೆಣ್ಣುಮಕ್ಕಳು ಶಿಕ್ಷಣ ಕೈಬಿಡಬೇಕಾಗುತ್ತದೆ ಮತ್ತು ಶಾಲೆಯನ್ನು ತೊರೆಯ–ಬೇಕಾಗುತ್ತದೆ ಎನ್ನುವ ಬದುಕಿನ ಕಟುವಾಸ್ತವವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತದೆ.

ಈ ಪಠ್ಯಪುಸ್ತಕಗಳು ಪುರುಷರಿಗೆ ಹೋಲಿಸಿದರೆ ಮಹಿಳೆಯರು ಮನೆಕೆಲಸ ಹಾಗು ಉದ್ಯೋಗದ ಎರಡು ಹೊರೆಗಳನ್ನು ನಿಭಾಯಿಸಲು ಹೇಗೆ ಸಿಲುಕಿಕೊಂಡಿದ್ದಾರೆ ಎಂದು ಚರ್ಚಿಸುತ್ತವೆ. ಹರಿಯಾಣ ಮತ್ತು ತಮಿಳುನಾಡಿನಲ್ಲಿ ನಡೆಸಿದ ಸಮೀಕ್ಷೆ (ಎಸ್‌ಪಿಎಲ್ 2:50)ಯೊಂದನ್ನು ಉಲ್ಲೇಖಿಸಲಾಗಿದೆ. ಕೌಟುಂಬಿಕ ಹಿಂಸೆಯಂಥ ಲಿಂಗಾಧಾರಿತ ತಾರತಮ್ಯ (ಶಾಜಿಯಾ ಮತ್ತು ಕುಸುಂ, ಎಸ್‌ಪಿಎಲ್ 3:46–48) ಮತ್ತು ವರದಕ್ಷಿಣೆ ಸಾವುಗಳು (ಸುಧಾ ಗೋಯೆಲ್ ಕತೆ, ಎಸ್‌ಪಿಎಲ್ III:46–48) ಮತ್ತು ವರದಕ್ಷಿಣೆ ಸಾವು 3:58)ಗಳು ಉಲ್ಲೇಖಗೊಂಡಿವೆ.

ಪೌರತ್ವದ ನಿರ್ಮಾಣ:

ಈ ಮೊದಲಿನ ಎನ್‌ಸಿಇಆರ್‌ಟಿ ಪಠ್ಯಪುಸ್ತಕ(1975–2004) ಗಳಲ್ಲಿ ಪೌರತ್ವ ಎನ್ನುವುದು ಕರ್ತವ್ಯದ ಆಲೋಚನೆಗಳನ್ನು ಅವಲಂಬಿಸಿದೆ ಹಾಗು ಅದು ಹಕ್ಕುಗಳನ್ನು ಕಡೆಗಣಿಸುತ್ತದೆ ಎನ್ನುವುದನ್ನು ಮೇಲೆ ಉಲ್ಲೇಖಿಸಲಾಗಿದೆ. ರಾಷ್ಟ್ರ ನಿರ್ಮಾಣಕ್ಕೆ ಅಗತ್ಯವಾದ ಸೂಕ್ತ ಗುಣಗಳನ್ನು (Appropriate Qualities) ಬೆಳೆಸಿಕೊಳ್ಳುವ ಮೂಲಕ ಜವಾಬ್ದಾರಿಯುತ ಹಾಗು ಕರ್ತವ್ಯನಿಷ್ಠ ನಾಗರಿಕರಾಗಬೇಕು ಎಂದು ವಿದ್ಯಾರ್ಥಿಗಳಿಗೆ ಮತ್ತೆಮತ್ತೆ ನೆನಪಿಸಲಾಗುತ್ತದೆ ಎನ್ನುವುದು ಸ್ಪಷ್ಟ.

ಅಷ್ಟಲ್ಲದೆ, ಈ ಪಠ್ಯಪುಸ್ತಕಗಳಲ್ಲಿ ರಾಜ್ಯವು ಸದಾಕಾಲ ಪ್ರಜೆಗಳ ಒಳಿತನ್ನು ನೋಡಿಕೊಳ್ಳುವ ಅಖಂಡ, ಪಿತೃಪ್ರಧಾನ ಮತ್ತು ದಯಾಪರ ಸಂರಚನೆಯೆಂದು (Benevolent structure) ಚಿತ್ರಿಸಲಾಗಿ. ರಾಜ್ಯ ಆಡಳಿತ ಯಂತ್ರದ ಕಾರ್ಯನಿರ್ವಹಣೆಯಲ್ಲಿ ನಡೆಯಬಹುದಾದ ಲೋಪ / ನ್ಯಾಯ ವಿರೋಧಿ ಕಾರ್ಯಗಳ ಬಗ್ಗೆ ಇಲ್ಲವೇ ಸರ್ಕಾರ ಅಂಥ ಲೋಪಗಳನ್ನು ಪ್ರಜಾಸತ್ತಾತ್ಮಕವಾಗಿ ಹೇಗೆ ಸರಿಪಡಿಸಬಹುದು ಎನ್ನುವ ಬಗ್ಗೆ ಯಾವುದೇ ಚರ್ಚೆಗೆ ಅಷ್ಟೇನೂ ಅವಕಾಶ ಇರುವುದಿಲ್ಲ.

ಸಾಮಾಜಿಕ ಅಸಮಾನತೆಯ ವಿರುದ್ಧ ಸೆಡ್ಡು ಹೊಡೆಯುವುದು

ಎಸ್‌ಪಿಎಲ್ ಸರಣಿಯಲ್ಲಿ ನಾಗರಿಕರ ಹಕ್ಕುಗಳ ಚೌಕಟ್ಟಿನಲ್ಲಿ ಪೌರತ್ವವನ್ನು ವ್ಯಾಖ್ಯಾನಿಸಲಾಗಿದೆ. ಇಲ್ಲಿ ಪೌರತ್ವವನ್ನು ರಾಜಕೀಯ ಹಕ್ಕುಗಳು ಅಂದರೆ, ಪ್ರಜಾಪ್ರಭುತ್ವದಲ್ಲಿ ವಯಸ್ಕ ನಾಗರಿಕರನ್ನು ಅವರ, ಸಾಮಾಜಿಕ ಸ್ಥಿತಿಗತಿ ಏನೇ ಇದ್ದರೂ ಸಮಾನರಂತೆ ಮತ ಚಲಾವಣೆಯ ಹಕ್ಕು ಹೊಂದಿರುವುದು, ಇದನ್ನು ಒದಗಿಸುವ ಹಕ್ಕನ್ನು ಮೀರಿ ಪೌರತ್ವವನ್ನು ವ್ಯಾಖ್ಯಾನಿಸುವ ಪ್ರಯತ್ನ ಮಾಡಬೇಕಿದೆ. ಅಸಮಾನತೆ ಹಾಗು ನಾನಾ ಆಯಾಮಗಳ ಭೇದಗಳು ಇರುವ ನಾಗರಿಕರ ಸಮಾಜೋ–ಆರ್ಥಿಕ ವಾಸ್ತವ ಬದುಕಿನ ನೆಲೆಯಲ್ಲಿ ವಾಸ್ತವದಲ್ಲಿ ಸಮಾನತೆ ಎನ್ನುವುದರ ಮೂಲವನ್ನೇ ಪ್ರಶ್ನಿಸುತ್ತದೆ. ಉದಾಹರಣೆಗೆ, ಪಠ್ಯಪುಸ್ತಕವೊಂದು ನಾನಾ ಸಮಾಜೋ–ಆರ್ಥಿಕ ಹಿನ್ನೆಲೆಯ ನಾಗರಿಕರು (ಶಿಕ್ಷಕ, ಮನೆಕೆಲಸದವರು, ಸಲಹೆಗಾರ, ಉದ್ಯಮಿ) ಮತದಾನ ಕೇಂದ್ರದ ಎದುರು ಸರತಿ ಸಾಲಿನಲ್ಲಿ ನಿಲ್ಲುವ ಮೂಲಕ ನಾಗರಿಕರಾಗಿ ಸಮಾನ ಸ್ಥಾನಮಾನವನ್ನು ಹೊಂದಿದ್ದಾರೆ ಎಂದು ತೋರಿಸುವ ಕತೆಯೊಂದನ್ನು ಒಳಗೊಂಡಿದೆ. ಆದರೆ, ಮನೆ ಕೆಲಸ ಮಾಡುವ ಕಾಂತಾಳಿಗೆ, ತಾನು ಯಜಮಾನ, ಉದ್ಯಮಿ ಜೈನ್ ನಿಂತಿದ್ದ ಸರತಿ ಸಾಲಿನಲ್ಲಿ ನಿಂತು ಮತ ಚಲಾವಣೆ ಮಾಡಬಹುದಾದರೂ, ದಿನದ ಅಂತ್ಯದಲ್ಲಿ ತಮ್ಮಿಬ್ಬರ ನಡುವೆ ಅಗಾಧ ಕಂದಕವಿದೆ ಎನ್ನುವುದು ಅರಿವಾಗುತ್ತದೆ. ತನ್ನ ಉದ್ಯೋಗದಾತನ ವಿಶಾಲವಾದ ಅಪಾರ್ಟ್‌ಮೆಂಟ್‌ಗೆ ವ್ಯತಿರಿಕ್ತವಾಗಿ ಕಾಂತಾ ಕೊಳೆಗೇರಿಯೊಂದರ ಅತ್ಯಂತ ಹೊಲಸು ವಾತಾವರಣದಲ್ಲಿ ವಾಸಿಸುತ್ತಾಳೆ ಮತ್ತು ಕಾಯಿಲೆಯಿಂದ ಬಳಲುತ್ತಿದ್ದ ಕಿರಿಯ ಮಗಳನ್ನು ಮನೆಯಲ್ಲೇ ಬಿಟ್ಟು ವಿಧಿಯಿಲ್ಲದೆ ಕೆಲಸಕ್ಕೆ ಹೋಗುವ ಸ್ಥಿತಿಯಲ್ಲಿದ್ದಾಳೆ. ಮಾಲೀಕನ ಮನೆಯ ಕೆಲಸವನ್ನೆಲ್ಲ ಮುಗಿಸಿ ಆತನಿಂದ ಸ್ವಲ್ಪ ಹಣ ಸಾಲ ಪಡೆದ ನಂತರವೇ, ಮಗಳನ್ನು ಸಂಜೆ ಹೊತ್ತಿಗೆ ವೈದ್ಯರ ಬಳಿಗೆ ಕರೆದುಕೊಂಡು ಹೋಗಲು ಅವಳಿಗೆ ಸಾಧ್ಯವಾಗುತ್ತದೆ. ಅವಳು ಆಶ್ಚರ್ಯಪಡುತ್ತಾಳೆ: 'ಮತ ಚಲಾಯಿಸಲು ನಾವು ಒಂದೇ ಸರತಿ ಸಾಲಿನಲ್ಲಿ ನಿಂತಿರಬಹುದು. ಆದರೆ, ನಾವು ನಿಜವಾಗಿಯೂ ಸಮಾನರೇ?' (ಎಸ್‌ಪಿಎಲ್ 2:4–6).

ಅಸಮಾನತೆ ಅಸ್ತಿತ್ವದಲ್ಲಿರುವ ಈ ಹಿನ್ನೆಲೆಯಲ್ಲಿ ಸಂವಿಧಾನವು ಮೂಲಭೂತ ಹಕ್ಕುಗಳ ರೂಪದಲ್ಲಿ ಕೊಡಮಾಡಿದ ನಾಗರಿಕ, ಸಾಮಾಜಿಕ ಹಾಗು ಆರ್ಥಿಕ ಹಕ್ಕುಗಳ ಪ್ರಾಮುಖ್ಯತೆಯನ್ನು ಕುರಿತು ಪಠ್ಯಪುಸ್ತಕಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಪಠ್ಯಪುಸ್ತಕಗಳಲ್ಲಿ ಮುಖ್ಯವಾಗಿ, ಸಮಾನತೆಯ ಹಕ್ಕು (ವಿಧಿ 15) ಹಾಗು ಬದುಕುವ ಹಕ್ಕು (ವಿಧಿ 21)ಗಳನ್ನು ಉಲ್ಲೇಖಿಸಲಾಗಿದೆ. ಹಲವು ಪ್ರಕರಣ ಅಧ್ಯಯನಗಳ ಮೂಲಕ, ಈ ಹಕ್ಕುಗಳು ಲಭ್ಯವಾದಲ್ಲಿ ಸಾಮಾಜಿಕ ಅಸಮಾನತೆಗಳಿಗೆ ಸವಾಲು ಎಸೆಯಲು ಸಾಧ್ಯವಾಗುವುದಲ್ಲದೆ, ಎಲ್ಲ ನಾಗರಿಕರೂ ಘನತೆಯ ಬದುಕನ್ನು ಹೊಂದುವಂತೆ ಖಾತ್ರಿಗೊಳಿಸಬಹುದು ಎಂದು ಪಠ್ಯಪುಸ್ತಕಗಳು ತೋರಿಸಿಕೊಡುತ್ತವೆ. ಸಂವಿಧಾನದಲ್ಲಿ ಈ ಹಕ್ಕುಗಳು ಇದ್ದರೂ, ನಾಗರಿಕರು ಎಲ್ಲ ಕಾಲದಲ್ಲೂ ಇವುಗಳನ್ನು ಚಲಾಯಿಸಲು ಸುಲಭವಲ್ಲ ಎಂದೂ ತೋರಿಸಿಕೊಡುತ್ತವೆ.

ಬದಲಾಗಿ, ಈ ಹಕ್ಕುಗಳನ್ನು ವ್ಯಕ್ತಿಗಳು, ಸಂಸ್ಥೆಗಳು ಹಾಗು ರಾಜ್ಯ ಕೂಡ ಪ್ರಶ್ನಿಸುತ್ತದೆ, ಹತ್ತಿಕ್ಕುತ್ತವೆ ಹಾಗು ಉಲ್ಲಂಘಿಸುತ್ತವೆ. ಬಹುತೇಕ ಪ್ರಕರಣಗಳಲ್ಲಿ ನಾಗರಿಕರು ಒಂದಲ್ಲ ಒಂದು ರೀತಿ ಸಾಮಾಜಿಕ ತಾರತಮ್ಯಕ್ಕೆ ಸಿಲುಕಿರುವುದನ್ನು ತೋರಿಸಲಾಗಿದೆ. ಅದು ಜಾತಿ ಆಧಾರಿತ (ಬಿ.ಆರ್.ಅಂಬೇಡ್ಕರ್, ಎಸ್‌ಪಿಎಲ್ I:19–20 ಮತ್ತು ಓಂಪ್ರಕಾಶ್ ವಾಲ್ಮೀಕಿ ಎಸ್‌ಪಿಎಲ್ II:7–8) ಅಥವಾ ಲಿಂಗಾಧಾರಿತ (ಜಸ್‌ಪ್ರೀತ್ ಕತೆ ಎಸ್‌ಪಿಎಲ್ II:47–48) ಅಥವಾ ಧರ್ಮಾ–ಧಾರಿತ (ಅನ್ಸಾರಿ, ಎಸ್‌ಪಿಎಲ್ II:8) ಕತೆ ಆಗಿರಬಹುದು. ನಾಗರಿಕನೊಬ್ಬನ ಆರ್ಥಿಕ ಹಿನ್ನೆಲೆಯ ಕಾರಣದಿಂದ ಆತ/ಆಕೆ ಸಮಾಜದ ಪ್ರಬಲರು ಹಾಗು ಶ್ರೀಮಂತರಿಂದ ಶೋಷಣೆಗೀಡಾದ ಉದಾಹರಣೆಗಳನ್ನು ಕೂಡ ಸನ್ನಿವೇಶಗಳಲ್ಲಿ ನೋಡಬಹುದು (ಓಂಪ್ರಕಾಶ್, ಭೂರಹಿತ ಕಾರ್ಮಿಕ, ಎಸ್‌ಪಿಎಲ್ I:44–45)

ರಾಜ್ಯವನ್ನು ಉತ್ತರದಾಯಿತ್ವದ ಸ್ಥಿತಿಯಲ್ಲಿರಿಸುವುದು

ಸರ್ಕಾರದ ನಾನಾ ಇಲಾಖೆಗಳ ಕಾರ್ಯ ನಿರ್ವಹಣೆಯಲ್ಲಿನ ದೋಷಗಳಿಂದಾಗಿ ನಾಗರಿಕರು ಶಾಸನಾತ್ಮಕ ಹಕ್ಕುಗಳನ್ನು ಕಳೆದುಕೊಂಡಿರುವ ಹಲವು ಪ್ರಕರಣಗಳನ್ನು ಎಸ್‌ಪಿಎಲ್



ಮಹಿಳೆಯರು ಜಗತ್ತನ್ನು ಬದಲಾಯಿಸುತ್ತಾರೆ, ಎಸ್‌ಪಿಎಲ್ !! ಎನ್‌ಸಿಇಆರ್‌ಟಿ, 2007

ಪಠ್ಯಪುಸ್ತಕಗಳು ಚರ್ಚಿಸುತ್ತವೆ. ಕೆಲವು ಕತೆಗಳು ಸ್ಪಷ್ಟವಾಗಿ ರಾಜ್ಯದ ಉದ್ದೇಶಪೂರ್ವಕ ಹಾಗು ಉತ್ಸಾಹಹೀನ ಮನೋ–ಭಾವವನ್ನು ಬಿಂಬಿಸುತ್ತವೆ (ಕಾರ್ಖಾನೆ ನೌಕರರು ಮತ್ತು ನಾಗರಿಕರ ಸುರಕ್ಷತೆ ಹಾಗು ಭದ್ರತೆಯನ್ನು ಖಾತ್ರಿಗೊಳಿಸುವಲ್ಲಿ ರಾಜ್ಯದ ವೈಫಲ್ಯ, ಭೋಪಾಲ್ ಅನಿಲ ದುರಂತ ಕುರಿತ ಚಿತ್ರಲೇಖನ, ಎಸ್‌ಪಿಎಲ್ III:124–127). ಕೆಲವು ಪ್ರಕರಣಗಳಲ್ಲಿ ರಾಜ್ಯವು ಉದ್ದೇಶಪೂರ್ವಕವಾಗಿ ಜನರ ಹಕ್ಕನ್ನು ಹತ್ತಿಕ್ಕುವ ಕ್ರಮ ಕೈಗೊಂಡಿರುವುದನ್ನು ನಿರೂಪಿಸುತ್ತವೆ (ಅರಣ್ಯವಾಸಿಗಳ ಪ್ರಕರಣ, ತವಾ ಮತ್ಸ್ಯ ಸಂಘದ ಕತೆ, ಎಸ್‌ಪಿಎಲ್ II:117–119).

ಹಕ್ಕುಗಳ ಮರುಪಡೆಯುವಿಕೆ:

ಪೌರತ್ವವನ್ನು ಇಲ್ಲಿ ಬಿಂಬಿಸಿರುವ ರೀತಿ ನೋಡಿದರೆ, ನಾಗರಿಕರ ಹಕ್ಕುಗಳನ್ನು ಕುರಿತು ಅಥವಾ ಗುಂಪು–ವ್ಯಕ್ತಿಗಳಿಗೆ ಆ ಹಕ್ಕುಗಳನ್ನು ಹೇಗೆ ನಿರಾಕರಿಸಲಾಗುತ್ತಿದೆ ಎನ್ನುವ ಚರ್ಚೆಗೆ ಸೀಮಿತವಾಗದೆ ಇರುವುದು ಈ ಪಠ್ಯಪುಸ್ತಕಗಳ ಆಸಕ್ತಿಕರ ಅಂಶವಾಗಿದೆ. ಬದಲಾಗಿ, ಚರ್ಚೆಯು ಅಂಥ ಹಕ್ಕುಗಳನ್ನು ಯಾವ ರೀತಿ ಸಾಧ್ಯವಾಗಿಸಬಹುದು ಹಾಗು ಮರಳಿ ಪಡೆಯಬಹುದು ಎನ್ನುವ ಸಾಧ್ಯತೆಗಳನ್ನು ಶೋಧಿಸುತ್ತದೆ. ಸಾಮಾಜಿಕ ವರ್ಗಗಳು ಯಾವುದೇ ಆಗಿರಲಿ, ಹೆಚ್ಚಿನ ನಾಗರಿಕರು ತಮ್ಮ ಕರ್ತೃತ್ವತೆಯನ್ನು ಚಲಾಯಿಸುವುದನ್ನು ನಾವು ನೋಡುತ್ತೇವೆ. ಉದಾಹರಣೆಗೆ, ಮಹಿಳೆಯರು ಚಾಲ್ತಿಯಲ್ಲಿರುವ ಸಾಮಾಜಿಕ ಪದ್ಧತಿ ಹಾಗು ಪೂರ್ವಗ್ರಹಗಳಿಗೆ ಸವಾಲೆಸೆದು ತಮ್ಮ ಹಕ್ಕು ಸ್ಥಾಪಿಸುತ್ತಾರೆ. (ರಮಾಬಾಯಿ ಎಸ್‌ಪಿಎಲ್ II:59) ಅಥವಾ ಆತ್ಮಸ್ಥೈರ್ಯದಿಂದ ತಮ್ಮ ಆಶಯಗಳನ್ನು ಸಾಕಾರಗೊಳಿಸಲು ಮುಂದಾಗುತ್ತಾರೆ. (ಲಕ್ಷ್ಮೀ ಲಾಕ್ರ, ಎಸ್‌ಪಿಎಲ್ II:57). ಹಲವು ಪ್ರಕರಣಗಳಲ್ಲಿ ನಾಗರಿಕರು ಕಾನೂನಿನ ನೆರವು ಪಡೆದುಕೊಳ್ಳುವುದು ಹಾಗು ರಾಜ್ಯಗಳ ನಾನಾ ಸಂಸ್ಥೆಗಳ ಮಧ್ಯಪ್ರವೇಶವನ್ನು ಕೇಳುವುದು (ತನ್ನ ಭೂಮಿಯನ್ನು ಅತಿಕ್ರಮಿಸಿದ್ದಕ್ಕೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ತನ್ನ ನೆರೆಯವನ ವಿರುದ್ಧ ಎಫ್‌ಐಆರ್ ದಾಖಲಿಸಿದ ಮೋಹನ್ ಕತೆ, ಎಸ್‌ಪಿಎಲ್ I:49–50). ಹಕ್ಕುಗಳನ್ನು ಹತ್ತಿಕ್ಕಿದಾಗ, ನ್ಯಾಯಾಲಯದ ಮೊರೆ ಹೋಗುವುದೂ ತನ್ನ. ಕೃಷಿ ಕಾರ್ಮಿಕ ಹಕೀಂ ಶೇಖ್ ಗಂಭೀರ ಅಪಘಾತದ ಬಳಿಕ ತನಗೆ ಚಿಕಿತ್ಸೆ ನಿರಾಕರಿಸಿದ ಸರ್ಕಾರಿ ಆಸ್ಪತ್ರೆಗಳ ಮೇಲೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ ಪ್ರಕರಣ ಅಧ್ಯಯನದೆಡೆಗೆ ಕೂಡ ಗಮನ ಸೆಳೆಯಬೇಕಾಗುತ್ತದೆ. (ಎಸ್‌ಪಿಎಲ್ II:21).

ಸಾಮೂಹಿಕ ಚಳವಳಿ:

ಸಹಕಾರ ಸಂಘಗಳ ರಚನೆ ಹಾಗು ಸಾಮಾಜಿಕ ಆಂದೋಲನಗಳನ್ನು ಕಟ್ಟಿಕೊಳ್ಳುವ ಮೂಲಕ ತಮ್ಮ ಹಕ್ಕುಗಳನ್ನು ಮರುಸ್ಥಾಪಿಸಲು ಪ್ರಜೆಗಳು ಹೋರಾಡುತ್ತಿರುವ ಸಾಮುದಾಯಿಕ ಚಳುವಳಿಗಳನ್ನು (Collective action) ಪಠ್ಯಪುಸ್ತಕಗಳು ಎತ್ತಿಹಿಡಿದಿವೆ. ಪಠ್ಯಪುಸ್ತಕಗಳು ಸಮಾಜದ ಶಿಕ್ಷಿತ ಮಧ್ಯಮ ಅಥವಾ ಮೇಲ್ಮಧ್ಯಮ ವರ್ಗಗಳು ಸಾಮಾಜಿಕ ಅಸಮಾನತೆಯ ವಿರುದ್ಧ ನಡೆಸಿದ ಹೋರಾಟಗಳನ್ನು ಉಲ್ಲೇಖಿಸುತ್ತವೆ (ಉದಾಹರಣೆಗೆ, ಲಾಯರ್ಸ್ ಕಲೆಕ್ಟಿವ್ ಹಾಗು ರಾಷ್ಟ್ರೀಯ ಮಹಿಳಾ ಆಯೋಗ (National Commission for Women) ಕೌಟುಂಬಿಕ ಹಿಂಸಾಚಾರಕ್ಕೆ ಸಂಬಂಧಿಸಿದ ಕಾನೂನನ್ನು ತರಲು ನೀಡಿದ ಕೊಡುಗೆ ಕುರಿತ ಕತೆ, ಎಸ್‌ಪಿಎಲ್ 3:46–48). ಆದರೆ, ಹೆಚ್ಚಿನ ಸಂದರ್ಭಗಳಲ್ಲಿ ಸಾಮಾನ್ಯ ಜನರು ಅದರಲ್ಲೂ ಅಂಚಿನಲ್ಲಿ ಬದುಕುತ್ತಿರುವವರು ಸಾಮೂಹಿಕವಾಗಿ ಒಗ್ಗೂಡಿ ಪಾಲ್ಗೊಳ್ಳುವ ಸಾರ್ವಜನಿಕ ಮೆರವಣಿಗೆ ಮತ್ತು ಪ್ರತಿಭಟನಾ ಜಾಥಾಗಳು, ಸಾರ್ವಜನಿಕ ವಿಚಾರಣೆ ನಡೆಸುವುದು, ಧರಣಿ ಕೂರುವುದು ಮತ್ತು ತಮ್ಮ ಅಭಿಪ್ರಾಯಭೇದವನ್ನು ನಾಟಕ, ಹಾಡು, ಹಾಗು ಕ್ರಿಯಾಶೀಲ ಬರಹದ ಮೂಲಕ ತೋರ್ಪಡಿಸುವುದು ಹೆಚ್ಚು ಗಮನ ಸೆಳೆಯುತ್ತದೆ. ಪಠ್ಯಪುಸ್ತಕಗಳಲ್ಲಿ ಉಲ್ಲೇಖಗೊಂಡ ಪ್ರಮುಖ ಉದಾಹರಣೆಗಳೆಂದರೆ, ಮಧ್ಯಪ್ರದೇಶದ ಕಾಡುಗಳಿಂದ ಸ್ಥಳಾಂತರಗೊಂಡ ಅರಣ್ಯವಾಸಿಗಳಿಂದ ತವಾ ಮತ್ಸ್ಯ ಸಂಘ ನಡೆಸಿದ ಹೋರಾಟ (ಎಸ್‌ಪಿಎಲ್ II:118) ಮತ್ತು ಸಮಾನ ಪೌರತ್ವದ ಹಕ್ಕುಗಳಿಗಾಗಿ ಮಹಿಳೆಯರು ನಡೆಸಿದ ಚಳವಳಿ (ಎಸ್‌ಪಿಎಲ್ II:63–67).

ಆದರೆ, ನಾಗರಿಕರು ಎಲ್ಲ ಪ್ರಕರಣಗಳಲ್ಲೂ ವಿಜಯ–ಶಾಲಿಗಳಾಗುವುದಿಲ್ಲ. ಬದಲಾಗಿ, ಪಠ್ಯಪುಸ್ತಕಗಳು ನಾಗರಿಕರಲ್ಲಿ ಹೋರಾಟದ ಸ್ಫೂರ್ತಿಯನ್ನು ತುಂಬುತ್ತವೆ ಮತ್ತು ಯಾವುದೇ ರೀತಿಯ ಅನ್ಯಾಯ ಹಾಗು ಅಸಮಾನತೆಯ ವಿರುದ್ಧ ಹೋರಾಟದಲ್ಲಿ ತೊಡಗುವುದು ಶಾಸನಬದ್ಧವಾದುದು ಮತ್ತು ಪ್ರಜಾಪ್ರಭುತ್ವದ ಆಶಯಗಳಿಗೆ ಪೂರಕವಾದುದು ಎಂದು ಉತ್ತೇಜಿಸುತ್ತವೆ. ಇದು ಖಂಡಿತವಾಗಿಯೂ ಈ ಪಠ್ಯಪುಸ್ತಕಗಳಲ್ಲಿ ಪೌರತ್ವ ಮತ್ತು ಪೌರತ್ವದ ಶಿಕ್ಷಣದ ಪರಿಕಲ್ಪನೆಗಳನ್ನು ನೋಡುವ ದೃಷ್ಟಿಕೋನದಲ್ಲಿನ ಬದಲಾವಣೆಯ ಗುರುತಾಗಿದೆ.

ಶಿಕ್ಷಕರ ಪಾತ್ರ:

ಪಠ್ಯಪುಸ್ತಕಗಳು ರಾಷ್ಟ್ರೀಯ ಕಲ್ಪನೆಯಲ್ಲಿರುವ ಪೌರತ್ವದ ಸ್ವರೂಪವನ್ನು ಒದಗಿಸಬಹುದಾದರೂ, ಆ ಕಾಣ್ಕೆಯನ್ನು ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಮನಗಾಣಿಸುವಲ್ಲಿ ಶಿಕ್ಷಕರ ಪಾತ್ರ ನಿರ್ಣಾಯಕವಾದುದು. ಮೊದಲಿಗೆ, ತರಗತಿ ಕೊಠಡಿಯಲ್ಲಿ ವಿದ್ಯಾರ್ಥಿಗಳು ಯಾವುದೇ ಹಿಂಜರಿಕೆಯಿಲ್ಲದೆ ನಾನಾ ವಿಷಯಗಳನ್ನು ಕುರಿತು ತಮ್ಮ ಆಲೋಚನೆ ಹಾಗು ವಿಚಾರಗಳನ್ನು ಯಾವುದೇ ಹಿಂಜರಿಕೆಯಿಲ್ಲದೆ ಅಭಿವ್ಯಕ್ತಗೊಳಿಸಲು ಸಾಧ್ಯವಾಗುವಂಥ ವಾತಾವರಣವನ್ನು ಶಿಕ್ಷಕರು ಸೃಷ್ಟಿಸುವುದು ಬಹಳ ಮುಖ್ಯ. ಮಕ್ಕಳು ತಮ್ಮ ವೈವಿಧ್ಯಮಯ ಮತ್ತು ಬಹುತ್ವದ ದೃಷ್ಟಿಕೋನಗಳನ್ನು ಬಾಯಿ ಮುಚ್ಚಿಸುತ್ತಾರೆ ಇಲ್ಲವೇ ತಮ್ಮ ಬಗ್ಗೆ ಯಾವುದೇ ನಿಲುವನ್ನು ತಾಳುತ್ತಾರೆ ಎನ್ನುವ ಭೀತಿಯಿಲ್ಲದೆ ಅಭಿವ್ಯಕ್ತಿಸುವ ಪ್ರಜಾಸತ್ತಾತ್ಮಕ ಸಂಸ್ಕೃತಿಯನ್ನು ಸೃಷ್ಟಿಸುವುದು ಈ ಆಲೋಚನೆಯ ಹಿಂದಿನ ಉದ್ದೇಶ.

ವಿದ್ಯಾರ್ಥಿಗಳು ಚರ್ಚಿಸುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಬದುಕಿನ ದೈನಂದಿನ ಅನುಭವಗಳನ್ನು ಆಧರಿಸಿದ ಸೂಕ್ತ ಸ್ಥಳೀಯ ಉದಾಹರಣೆಗಳನ್ನು ತರುವಂತೆ ಉತ್ತೇಜಿಸುವುದು ಶಿಕ್ಷಕರಿಗೆ ಸಾಧ್ಯವಾಗಬೇಕು. ಶಿಕ್ಷಕರು ಪಠ್ಯಪುಸ್ತಕದಾಚೆಗೆ ವಿದ್ಯಾರ್ಥಿಗಳನ್ನು ಕರೆದೊಯ್ದಲ್ಲಿ ಮಾತ್ರ ಇದು ಸಾಧ್ಯವಾಗಲಿದೆ. ಇಂಥ ವಿಧಾನಗಳು ತರಗತಿಯಲ್ಲಿನ ಚರ್ಚೆಯನ್ನು ಸಮೃದ್ಧಗೊಳಿಸುವ ಜೊತೆಗೆ, ಉರುಹಚ್ಚುವಿಕೆಯನ್ನು ತಡೆಯುತ್ತದೆ: ದೀರ್ಘಕಾಲದಲ್ಲಿ ವಿದ್ಯಾರ್ಥಿಗಳ ಕಲಿಕೆಯನ್ನು ಬಲಪಡಿಸುತ್ತದೆ.

ಮಕ್ಕಳು ಪಠ್ಯಪುಸ್ತಕ ಮಾತ್ರವಲ್ಲದೆ, ಮುದ್ರಣ ಹಾಗು ವಿದ್ಯುನ್ಮಾನ ಮಾಧ್ಯಮ ಸೇರಿದಂತೆ ನಾನಾ ಮೂಲಗಳಿಂದ ಜ್ಞಾನವನ್ನು ಪಡೆದುಕೊಳ್ಳಬಹುದು ಎಂಬುದನ್ನು ಶಿಕ್ಷಕರು ಅರ್ಥ ಮಾಡಿಕೊಳ್ಳಬೇಕಿದೆ. ಹೀಗಾಗಿ, ಶಿಕ್ಷಕರು ಅಗತ್ಯವಿರುವ ಸ್ಥಳೀಯ ಹಾಗು ರಾಷ್ಟ್ರೀಯ ಸಂಗತಿಗಳ ಬಗ್ಗೆ ಅರಿವು ಹೊಂದಿರಬೇಕು ಮತ್ತು ಅಗತ್ಯವಿರುವಾಗ ವಿದ್ಯಾರ್ಥಿಗಳನ್ನು ಚರ್ಚೆಯಲ್ಲಿ ತೊಡಗಿಸುವ ಸಾಮರ್ಥ್ಯ ಹೊಂದಿರಬೇಕು.

ಎಸ್‌ಪಿಎಲ್ ಪಠ್ಯಪುಸ್ತಕವೊಂದರಲ್ಲಿ (ಶಿಕ್ಷಕರಿಗೆ ಪರಿಚಯಾತ್ಮಕ ಟಿಪ್ಪಣಿ, ಎಸ್‌ಪಿಎಲ್ III) ಈ ಸರಣಿಯು ವಿಶೇಷವಾಗಿ ಜಾತಿ, ಲಿಂಗ, ವರ್ಗ ಮತ್ತು ಧರ್ಮವನ್ನು ಆಧರಿಸಿದ ಅಸಮಾನತೆ ಬಗ್ಗೆ ವಿವರಿಸುತ್ತದೆ ಮತ್ತು ತರಗತಿ ಕೊಠಡಿಯಲ್ಲಿ ಇಂಥ ವ್ಯತ್ಯಾಸಗಳನ್ನು ಒಳಗೊಂಡಿರುವ ಎಲ್ಲ ಸಾಧ್ಯತೆಯಿದೆ ಎಂದು ಹೇಳಲಾಗಿದೆ. ಇದನ್ನು ಮನಸ್ಸಿನಲ್ಲಿ ಇರಿಸಿಕೊಂಡು, ಇಂಥ ವಿಷಯಗಳನ್ನು ಚರ್ಚಿಸುವಾಗ ಶಿಕ್ಷಕರು ಇನ್ನಷ್ಟು ಸೂಕ್ಷ್ಮತೆಯನ್ನು ತೋರಿಸುವುದು ಮುಖ್ಯವಾಗಲಿದೆ.

ಮುಕ್ತಾಯ:

ಪಠ್ಯಪುಸ್ತಕಗಳು ದೇಶದ ಸಾಮೂಹಿಕ ಕಲ್ಪನೆಯನ್ನು ರೂಪು–ಗೊಳಿಸುವ ಸಾಂಸ್ಕೃತಿಕ ಸಾಧನಗಳು. ಎನ್‌ಸಿಎಫ್ 2005ರ ಜಾರಿಯ ಬಳಿಕ ಪರಿಚಯಿಸಲ್ಪಟ್ಟ 'ದ ಲುಕ್ಕಿಂಗ್ ಅರೌಂಡ್ ಸಿರೀಸ್' ಮತ್ತು ಎಸ್‌ಪಿಎಲ್ ಪಠ್ಯಪುಸ್ತಕಗಳು ಭಾರತೀಯ ಸಂವಿಧಾನದಲ್ಲಿನ ಮೌಲ್ಯಗಳಿಗೆ ಅನುಗುಣವಾದ ಪೌರತ್ವ ಶಿಕ್ಷಣದ ರೂಪುರೇಷೆಯನ್ನು ಹೇಗೆ ರೂಪಿಸಬೇಕು ಎಂಬುದನ್ನು ಯಶಸ್ವಿಯಾಗಿ ತೋರಿಸಿಕೊಟ್ಟಿದೆ. ಮೇಲಿನ ವಿಶ್ಲೇಷಣೆಯು ಕಾಣಿಸುವಂತೆ ರಾಷ್ಟ್ರವನ್ನು ಕಲ್ಪಿಸಿಕೊಳ್ಳುವುದು ಹೇಗೆ, ಲಿಂಗ ಸಂಬಂಧಿತ ವಿಷಯಗಳನ್ನು ಹೇಗೆ ನೋಡಬೇಕು ಮತ್ತು ಮಾನವಹಕ್ಕುಗಳ ಚೌಕಟ್ಟಿನಲ್ಲಿ ಪೌರತ್ವವನ್ನು ಹೇಗೆ ಸಂರಚಿಸಲಾಗಿದೆ ಎಂಬುದನ್ನು ವಿಶದಪಡಿಸಲಾಗಿದೆ. ಈ ಆಲೋಚನೆಗಳು ತರಗತಿ ಕೊಠಡಿಯಲ್ಲಿ ಶಿಕ್ಷಕರ ಮಧ್ಯಸ್ಥಿಕೆಯಲ್ಲಿ ಹೇಗೆ ಅನುಕರಿಸಲ್ಪಡುತ್ತವೆ ಎಂಬುದನ್ನು ನೋಡಬೇಕಿದೆ.

1. ಎನ್‌ಸಿಎಫ್ 2005, ಯುಪಿಎ–1ರ ಅವಧಿಯಿಂದ (2004–2014) ಅನುಷ್ಠಾನದಲ್ಲಿದ್ದು, ಕಾಲಾವಧಿಯನ್ನು ಮೀರಿ ಅಧಿಕಾರ ಹಸ್ತಾಂತರವಾಗಿ ಇನ್ನೊಂದು ಸರ್ಕಾರ ರೂಪುಗೊಂಡ ಮೇಲೂ ಜಾರಿಯಲ್ಲಿದೆ.
2. ಮುಂದೆ 'ಲುಕ್ಕಿಂಗ್ ಅರೌಂಡ್' ಮತ್ತು 'ಸೋಷಿಯಲ್ ಆಂಡ್ ಪೊಲಿಟಿಕಲ್ ಲೈಫ್' ಅನ್ನು ಎಲ್‌ಎ ಹಾಗು ಎಸ್‌ಪಿಎಲ್ ಎಂದು ಕರೆಯಲಾಗುತ್ತಿದೆ.

ಉಲ್ಲೇಖಗಳು:

Advani, Shalini. 2009. *Schooling the National Imagination: Education, English and the Indian Modern*. New Delhi: Oxford University Press.

Batra, Poonam. 2010. *Social Science Learning in Schools: Perspectives and Challenges*. New Delhi: Sage Publications.

Bhog, Dipta (Ed.). 2010. *Textbook Regimes: An Overall Analysis*. New Delhi: Nirantar.

Jain, Manish. 2004. 'Civics, Citizen and Human Rights: Civics Discourse in India', *Contemporary Education Dialogue*, 1(2): 165-198.

Jayal, Niraja Gopal. 2013. *Citizenship and its Discontents: An Indian History.* Ranikhet: Permanent Black

NCERT textbooks mentioned in the text:

- *National Curriculum Framework for School Education*. 2000. NCERT: New Delhi
- *National Curriculum Framework*. 2005. NCERT: New Delhi



ರೂಪಮಂಜರಿ ಹೆಗ್ಡೆ, ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಿಂದ ಶೈಕ್ಷಣಿಕ ಸಮಾಜಶಾಸ್ತ್ರದಲ್ಲಿ ಪಿಎಚ್‌ಡಿ ಪದವಿಯನ್ನು ಪಡೆದಿದ್ದಾರೆ. ಸಮಾಜವಿಜ್ಞಾನದ ಪಠ್ಯಕ್ರಮ, ಪಠ್ಯಪುಸ್ತಕಗಳು ಮತ್ತು ತರಗತಿ ಕೊಠಡಿಯಲ್ಲಿನ ಬೋಧನಾ ವಿಧಾನಗಳು ಅವರ ಸಂಶೋಧನೆಯ ಕ್ಷೇತ್ರವಾಗಿದೆ. ಪ್ರಸ್ತುತ ಗುರುಗ್ರಾಮದ ಸ್ವಯಂಸೇವಾ ಸಂಘಟನೆ 'ಐ ಆಮ್ ಎ ಟೀಚರ್'ನಲ್ಲಿ ಶಿಕ್ಷಕರ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶೈಕ್ಷಣಿಕ ಕ್ಷೇತ್ರದಲ್ಲಿ ಇಪ್ಪತ್ತು ವರ್ಷದ ಅನುಭವ ಹೊಂದಿರುವ ರೂಪಮಂಜರಿ ಅವರು, ಐ ಡಿಸ್ಕವರಿ ಎಜುಕೇಷನ್ (ಗುರುಗ್ರಾಮ) ಮತ್ತು ನೀವ್ (NEEV -New Delhi) ತಂಡದ ಮುಂಚೂಣಿ ಸದಸ್ಯೆಯಾಗಿ ಸಮಾಜವಿಜ್ಞಾನ ಹಾಗು ಇವಿಎಸ್‌ನಲ್ಲಿ ಅನುಭವಾತ್ಮಕ ತರಗತಿ ಕೋಣೆಗಳನ್ನು ರೂಪಿಸಲು ಬೋಧನಾ ವಿನ್ಯಾಸ ಮತ್ತು ಮೌಲ್ಯಮಾಪನ ಕ್ಷೇತ್ರದಲ್ಲಿ ವಿಸ್ತೃತವಾಗಿ ಕಾರ್ಯ ನಿರ್ವಹಿಸಿದ್ದಾರೆ. ಭೂತಾನ್ ದೇಶದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಅಭಿವೃದ್ಧಿ ಯೋಜನೆಯ ಭಾಗವಾಗಿದ್ದರು. ಅವರ ಇಮೇಲ್: rupamanjarihegde@gmail.com

ಅನುವಾದ: **ಮಾಧವ ಐತಾಳ** । ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**